ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ಪ್ರಾಣಿಗಳಿಗೂ ಮನುಷ್ಯರಂತೆ ಮಾತನಾಡಲು ಬರುವಂತಿದ್ದರೆ ಏನಾಗುತ್ತಿತ್ತು?




ಕುರಿಗಳು 'ಕಟುಕರಿಗೆ ಧಿಕ್ಕಾರ!' ಎಂದು ವಾರ ವಾರವೂ ಸಂಪು ಹೂಡುತ್ತಿದ್ದವು.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಚುನಾವಣೆ ಬಂದಾಗ ಮಾತ್ರ ಮತದಾರನು ಪ್ರಭು ಆಗುವನಲ್ಲ ರಾಮ್?

ಬಲಿ ಹಾಕುವುದಕ್ಕೆ ಮುಂಚೆ ಟಗರನ್ನು ಕೊಬ್ಬಿಸುವುದು ನಮ್ಮ ಪದ್ಧತಿ.

ಎಂ.ಸಿ. ಧನ್ಯತಾ, ಬೆಂಗಳೂರು

ಗಡಿಗೂ, ಗಡಿಯಾರಕ್ಕೂ ಏನು ವ್ಯತ್ಯಾಸ?

ಗಡಿಯಾರದಲ್ಲಿ ನಿಮಿಷ ಅವಶ್ಯ; ಗಡಿಯಲ್ಲಿ ಅನಿಮಿಷ (ಎಚ್ಚರ) ಅವಶ್ಯ.

ಸುಶೀಲಾ ಎಸ್. ಪಾಟೀಲ, ಸಂಕೇಶ್ವರ

ವಿದ್ಯಾದಾನ ಶ್ರೇಷ್ಠವೋ, ಅನ್ನದಾನ ಶ್ರೇಷ್ಠವೋ?



ಅನ್ನ ಗಳಿಸಲು ಅವಶ್ಯವಾದ ವಿದ್ಯೆಯ ದಾನ ಶ್ರೇಷ್ಠ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಹಳ್ಳಿ ಹಳ್ಳಿಗೂ ಬಾರ್‌ಗಳಿವೆ. ಅನಾಥ ಸೇವಾಶ್ರಮಗಳು ಇಲ್ಲ. ಏಕೆ?

ಏಕೆಂದರೆ ಧರ್ಮಕ್ಕೆ ಬೀರ್ ಕುಡಿಯುವವರು ಹೇರಳ; ಧರ್ಮಭೀರುಗಳು ವಿರಳ.

ಬಿ. ಬಸವರಾಜ್, ಹರಿಹರ

ಡಾ. ರಾಜ್ ಅಭಿಮಾನಿಗಳ ಅಣ್ಣಾವ್ರು; ರೌಡಿಗಳು ಚೇಲಾಗಳ ಅಣ್ಣಾವ್ರು; ಏನು ವ್ಯತ್ಯಾಸ?

ಪ್ರೀತಿಯಿಂದ ಗಳಿಸಿದ ಬಿರುದು ಭೀತಿಯಿಂದ ಗಳಿಸಿದ್ದಕ್ಕಿಂತ ಶ್ರೇಷ್ಠವೇ.

ಪ್ರದೀಪಕುಮಾರ್, ಹೂವಿನಹಡಗಲಿ

ದೇವರ ಹೆಸರಿನಲ್ಲಿ ಮದ್ಯದ ಅಂಗಡಿಗಳನ್ನು ತೆರೆಯುವರಲ್ಲ, ಇದು ಸರಿಯೆ?

ಮದ್ಯವನ್ನೂ 'ಪರಮಾತ್ಮ' ಎನ್ನುವುದರಿಂದ ತಪ್ಪಿಲ್ಲ ಎಂದ ಗಡಂಗುದೊರೆ.

ಪೆಮ್ಮನಹಳ್ಳಿ ಚಿಕ್ಕಣ್ಣ, ಪಾವಗಡ

ಚಂದ್ರಲೋಕವನ್ನೇ ಕಂಡುಹಿಡಿದ ವಿಜ್ಞಾನಿಗಳು ದೇವಲೋಕವನ್ನು ಏಕೆ ಕಂಡುಹಿಡಿದಿಲ್ಲ?

ಅಲ್ಲಿನ ರೂಟ್ ಮ್ಯಾಪನ್ನು ವಿಜ್ಞಾನಿಗಳಿಗೆ ಸಿಗದಂತೆ ದೇವನು ಬ್ಲಾಕ್ ಮಾಡಿದ್ದಾನಂತೆ.

ಕಾವ್ಯಶ್ರೀ, ಶೋರಾಪುರ

ಮನಸ್ಸನ್ನು ತೋರಿಸುವ ಕನ್ನಡಿ ಯಾವುದು?

ಭಾವಪೂರ್ಣ ನೇತ್ರ.

ಅಮರಯ್ಯಾ ಪತ್ರಿಮಠ, ಸುರಪುರ

ದ್ವೇಷ, ಅಸೂಯೆಗಳನ್ನು ನಿವಾರಿಸುವ ಟಾನಿಕ್ ಯಾವುದು?

ಪ್ರೀತಿ, ಸ್ನೇಹ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಮಾತೃಭಾಷೆಯನ್ನು ಪಿತೃಭಾಷೆ ಎಂದೇಕೆ ಕರೆಯುವುದಿಲ್ಲ?

ಅದು ಕೊರಳಿನ ಭಾಷೆಯಾಗದೆ ಕರುಳಿನ ಭಾಷೆ ಆಗಲೆಂದು.

ಪಿ. ಶಂಕರಪ್ಪ, ಶಿವಮೊಗ್ಗ

ಹಲವರ ಪ್ರಶ್ನೆಗೆ ಥಟ್ಟನೆ ಉತ್ತರಿಸುವ ನೀವು ಯಾವ ಪಕ್ಷದವರು?

ಉತ್ತರೋತ್ತರ ಅಭಿವೃದ್ಧಿಯಾಗುವ ಪಕ್ಷದವರು.

ಮಲ್ಲಿಕಾರ್ಜುನ, ಸುರಧೇನುಪುರ

ಜೀವನದಲ್ಲಿ ವನ ಇರುವುದರ ಮಹತ್ವವೇನು?

ಕಾಡುವ ಜೀವನಕ್ಕಿಂತ ಕಾಡಿನಂತಹ ಸಮೃದ್ಧ ಶಾಂತ ಜೀವನ ಲೇಸೆಂದು ಸೂಚಿಸಲು.

ಚನ್ನವೀರಪ್ಪ, ಹಿರೇಹಡಗಲಿ

ಒಂದು ಜೀವಿ ಮತ್ತೊಂದನ್ನು ತಿಂದು ಬದುಕುತ್ತೆ. ಮನುಷ್ಯನನ್ನು ಯಾವ ಜೀವಿ ತಿಂದು ಬದುಕುತ್ತದೆ?

ಕಾಲವೆಂಬ ಸಾವಿಲ್ಲದ ಜೀವಿ.

## ಬಹುಮಾನಿತ ಪ್ರಶ್ನೆ

ಕೆ.ವಿ. ಗೋವಿಂದಾಚಾರಿ, ಮೈಸೂರು

ಕಳ್ಳರು ಕಳ್ಳತನದಲ್ಲಿ ಅನೇಕ ಬಾರಿ ಯಶಸ್ವಿಯಾಗುತ್ತಾರಲ್ಲ, ಏನಿದರ ಗುಟ್ಟು?

'ಮನೆಯ ಕೀ ವೈಟ್ ಶೂಲಿದೆ' ಎಂದು ಫೋನಲ್ಲಿ ಕಿರುಚಿ ಹೇಳುವ ದಡ್ಡತನವೇ.

ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ

ಪ್ಲಾಸ್ಟಿಕ್ ನಿಷೇಧ ಜಾಗೃತಿ ಶಿಬಿರದಲ್ಲೂ ಪ್ಲಾಸ್ಟಿಕ್ ಬಾಟಲಿಗಳಲ್ಲಿ ನೀರು ಕೊಡುತ್ತಿರುವರಲ್ಲ?

'ಪ್ಲಾಸ್ಟಿಕ್ ನಿಷೇಧವು ನೀರು ಕುಡಿದಷ್ಟು ಸಲೀಸಲ್ಲ' ಎಂಬ ವಾಸ್ತವವನ್ನು ಸೂಚಿಸಲಂತೆ.

ಗಂಗಾದೇವಿ, ಬೆಂಗಳೂರು

ಸಿನಿಮಾ ನಟಿಯರು ಸುಂದರವಾಗಿಲ್ಲದಿದ್ದರೂ ಬೆಡಗಿ, ಚೆಲುವೆ ಎಂದೆಲ್ಲ ವರ್ಣಿಸುವರಲ್ಲಾ?

ಅದು 'ಪೇಯ್ಡ್ ನ್ಯೂಸ್' ಅಡಿಯಲ್ಲಿ ಬರುವುದಂತೆ.

ಬಿ.ಆರ್. ಉಷಾ, ಬೆಂಗಳೂರು

ಹುಡುಗಿಯರಿಗೆ ವ್ಯಾನಿಟಿ ಬ್ಯಾಗ್ ಏಕೆ?



ಅದು ಕೇವಲ ಬ್ಯಾಗಲ್ಲ. ಅವಳ ರೂಪ ಗುಣ ಹಣ ಗಣ ಎಲ್ಲಕ್ಕೂ ಒದಗುವ ಮಾಯಾಸಂಪುಟ.

ವಿ. ಹೇಮಂತಕುಮಾರ್, ಬೆಂಗಳೂರು

ಜಿಲ್ಲೆಯನ್ನು ಆಳುವವಳು ಜಿರಳೆಗೆ ಹೆದರುತ್ತಾಳಲ್ಲಾ?

ಅವಳ ಮುಖವನ್ನೇ ಏರಿ ಮೀಸೆ ಆಡಿಸುತ್ತದಲ್ಲ!

ಹೆಚ್.ವಿ. ಶ್ರೀಧರ್, ಬೆಂಗಳೂರು

ವರ್ಷಭವಿಷ್ಯದಲ್ಲಿ ಧನಯೋಗ ಎಂದಿತ್ತು. ಮೊಬೈಲ್ ಸಂದೇಶದಲ್ಲಿ 1 ಕೋಟಿ ಬಂದಿದೆ. ಭವಿಷ್ಯ ನಿಜವಾಯಿತೆ?

ಸಂದೇಶದ ಲಿಂಕ್ ಕ್ಲಿಕ್ ಮಾಡಿದರೆ ಆ ಯೋಗವು ಶೀರ್ಷಾಸನ ಹಾಕುತ್ತದೆ.

■ ರಾಮ್